ಆತ್ಮಹತ್ಯೆ ನಡೆದಿರುವುದರಿಂದ ಇಷ್ಟು ಪ್ರಕಾರವಾಗಿ ಚರ್ಚೆಯಾಯಿತು. ಈಗ ಮಧ್ಯಂತರ ವರದಿಯನ್ನು ನೀವು ಹತ್ತು ಕೊಡಿ, ಕೊಡಬಾರದೂ ಎಂದೇನೂ ಇಲ್ಲ. ಸೀಮಿತವಾಗಿ ಕೊಡಿ. ಏಕೆಂದರೆ ಈ ಸಭೆಯಲ್ಲಿ ಈ ವಿಚಾರದ ಬಗ್ಗೆ ಬಹಳ ಪ್ರಾಮುಖ್ಯತೆ ಕೊಟ್ಟು ಚರ್ಚೆ ಮಾಡಿದ್ದೇವೆ. ಇದು ಉಳಿಯಬೇಕಾದರೆ ನೀವು ಎಲ್ಲವನ್ನೂ ಸೇರಿಸಿ ಡೈಲ್ಯೂಟ್ ಮಾಡಿದರೆ ಚೆನ್ನಾಗಿರುವುದಿಲ್ಲ, ನಮಗೆ ಕೂಡ ಅಷ್ಟು ಶೋಭೆ ತರುವಂಥದ್ದಲ್ಲ. ಆದ್ದರಿಂದ, ದಯವಿಟ್ಟು ಮಾನವೀಯತೆಯ ದೃಷ್ಟಿಯಿಂದ ಮಧ್ಯಂತರ ವರದಿಯನ್ನು ಕೊಡಿ.

ಉಪಾಧ್ಯಕ್ಷರು : ಶಿವಕುಮಾರ್‌ರವರೆ, ಮಾನ್ಯ ಸದಸ್ಯರು ಹೇಳುವ ಪ್ರಕಾರ ಆದಷ್ಟು ಬೇಗ ಮಧ್ಯಂತರ ವರದಿಯನ್ನು ಕೊಡಿ...

ಶ್ರೀ ಎಸ್. ಸುರೇಶ್ ಕುಮಾರ್ : ಈ ಸಮಿತಿ ಕೆಲಸ ಮಾಡುವ ರೀತಿಯಲ್ಲಿ ಫೈರ್ ಬ್ರಿಗೇಡ್ ಮಾಡಿ ಬಿಟ್ಟರೆ, ಎಲ್ಲಾ ಕಡೆ ಬೆಂಕಿ ಹತ್ತಿದ ನಂತರ ನಾವು ಆರಿಸುತ್ತೇವೆಂದರೆ. ಇಟ್ ಈಸ್ ಫೈರ್ ಬ್ರಿಗೇಡ್ ... ತಕ್ಷಣ ಹೋಗಬೇಕು, ಬೆಂಕಿ ಆರಿಸಬೇಕು. ಅಂತಿಮ ವರದಿ ಆಮೇಲೆ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಈ ರೀತಿ ಹಠ ಮಾಡುವುದನ್ನು ನೋಡಿದರೆ ನಮಗೆ ಬಹಳ ನೋವಾಗುತ್ತದೆ. ನಾಳೆ ಅಥವಾ ನಾಡಿದ್ದು ನಮಗೆ ಒಂದು ಮಧ್ಯಂತರ ವರದಿ ಕೊಡಿ...

ಶ್ರೀ ಎಂ. ಸಿ. ನಾಣಯ್ಯ : ಸಮಿತಿ ಮಾಡುವ ಕೆಲಸ, ಕಾರ್ಯಕ್ರಮಗಳ ಬಗ್ಗೆ ನಾವು ಇಲ್ಲಿ ಯಾವುದೇ ರೀತಿಯ ಮಾತುಗಳನ್ನು ಆಡಬಾರದು. ಅವರಿಗೂ ಕೂಡ ಜವಾಬ್ದಾರಿ ಇದೆ, ಈ ಜವಾಬ್ದಾರಿಯಿಂದಲೇ ಅವರು ಕೆಲಸ ಮಾಡುತ್ತಿದ್ದಾರೆ. ಒಂದು ವಿಚಾರ ಏನೆಂದರೆ, ಗುಲ್ಬರ್ಗಾ-ಬೀದರ್‌ಗೆ ಸೀಮಿತವಾಗಿ ಚರ್ಚೆ ನಡೆಸಿ, ಅಲ್ಲಿಂದ ಸಮಿತಿ ರಚನೆಯಾದನಂತರ, ಇತರೇ ಭಾಗಗಳಲ್ಲಿ ಏನು ನಡೆದಿದೆ ಎನ್ನುವುದರ ಬಗ್ಗೆ ವರದಿ ಕೊಡಿ ಎಂದು ಕೇಳಿದ್ದೇವೆ. ಅವರು ಅಂತಿಮವರದಿಗೆ ಮೇ -11 ರವರೆಗೆ ನಮಗೆ ಕಾಲಾವಕಾಶ ಕೊಡಿ ಎಂದು ಕೇಳಿದ್ದಾರೆ. ಅವರು ಕೇಳಿರುವ ಕಾಲಾವಕಾಶವನ್ನು ಕೊಡೋಣ. ಈ ಮಧ್ಯಂತರ ವರದಿಯನ್ನು ಕೊಡುವುದಕ್ಕೆ ಅವರು ಎಲ್ಲರೂ ಸೇರಿ ಪೂರ್ವಭಾವಿಯಾಗಿ ಚರ್ಚೆ ಮಾಡಬೇಕಾಗುತ್ತದೆ. ಬೀದರ್-ಗಲ್ಬರ್ಗಾಕ್ಕೆ ಸಂಬಂಧಪಟ್ಟಂತೆ ನೋಡಿರತಕ್ಕಂಥ ವಿಚಾರ ಈಗಾಗಲೇ ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸದನದ ಮುಂದೆ ನೀವು ತಾತ್ಕಾಲಿಕ ವರದಿಯನ್ನು ಇಡಲೇಬೇಕು. ನಿಮ್ಮ ವಾದವನ್ನು ನಾನು ಒಪ್ಪುವುದಿಲ್ಲ, ಇದಕ್ಕಾಗಿ ನಾನು ಸಭಾತ್ಯಾಗ ಮಾಡುತ್ತೇನೆ.

(ಸನ್ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ಈ ಸದನ ರಚನೆ ಮಾಡಿರುವ ಸಮಿತಿ ಸಂಪೂರ್ಣ ಸ್ವತಂತ್ರವಾಗಿದ್ದು, ಅದರ ಕಾರ್ಯಕಲಾಪಗಳ ಬಗ್ಗೆ ನಾವು ಮಾರ್ಗಸೂಚಿಗಳನ್ನು ಕೊಟ್ಟಿದ್ದೇವೆ. ಅವರು ಕಾಲಾವಕಾಶ